# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 643 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆಯುಷ್ ಇಲಾಖೆಯಲ್ಲಿ ಕಳೆದ 03 ವರ್ಷಗಳಿಂದ ಇಲ್ಲಿಯವರೆಗೂ ಔಷಧ ಖರೀದಿಗಾಗಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು;</td><td>ಆಯುಷ್ ಇಲಾಖೆಯಲ್ಲಿ ಕಳೆದ 03 ವರ್ಷಗಳಿಂದ ರಾಜ್ಯವಲಯದ ಅನುದಾನದಡಿ, ಖರೀದಿಸಲಾದ ಔಷಧಿಗಳ ವೆಚ್ಚದ ವಿವರ ಕೆಳಕಂಡಂತಿದೆ.
<table>
<tr><th>ವರ್ಷ</th><th>ಬಿಡುಗಡೆ (ರೂ. ಲಕ್ಷಗಳಲ್ಲಿ)</th><th>ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><td>2022-23</td><td>328.00</td><td>322.13</td></tr>
<tr><td>2023-24</td><td>385.00</td><td>349.78</td></tr>
<tr><td>2024-25</td><td>433.70</td><td>335.65</td></tr>
</table>
ರಾಷ್ಟ್ರೀಯ ಆಯುಷ್ ಅಭಿಯಾನದಡಿ, ಕಳೆದ 03 ವರ್ಷಗಳಲ್ಲಿ, ಖರೀದಿಸಲಾದ ಆಯುಷ್ ಔಷಧಿಗಳ ವೆಚ್ಚದ ವಿವರ.
<table>
<tr><th>ವರ್ಷ</th><th>ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><td>2022-23</td><td>1800.25</td></tr>
<tr><td>2023-24</td><td>3855.01</td></tr>
<tr><td>2024-25</td><td>ಆಯುಷ್ ಔಷಧಿಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.</td></tr>
</table>
</td></tr>
<tr><td>ಆ)</td><td>ಆಯುಷ್ ಇಲಾಖೆಯ ಔಷಧ ಖರೀದಿಯಲ್ಲಿ ಭಾರಿ ಭ್ರಷ್ಟಾಚಾರದ ದೂರು ಕೇಳಿ ಬಂದ ಹಿನ್ನಲೆಯಲ್ಲಿ ಸರ್ಕಾರದಿಂದ ಪ್ರಾಥಮಿಕ ತನಿಖೆ ನಡೆಸಲಾಯಿತೆ; ಹಾಗಿದ್ದಲ್ಲಿ ತನಿಖೆಯಿಂದ ಕಂಡು ಬಂದ ಅಂಶವೇನು; ಭ್ರಷ್ಟಾಚಾರ ನಡೆದಿರುವುದು ನಿಜವೇ;</td><td>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳ ಔಷಧಗಳನ್ನು ಮಾರುಕಟ್ಟೆ ದರಕ್ಕಿಂತ ಅಧಿಕವಾದ ದರದಲ್ಲಿ ಖರೀದಿಸಿರುವುದಕ್ಕೆ ಸಂಬಂಧಿಸಿದಂತೆ, ನಿರ್ದೇಶನಾಲಯದ ಪ್ರಾಥಮಿಕ ತನಿಖಾ ವರದಿಯಂತೆ ಸರ್ಕಾರದ ಆದೇಶ ಸಂಖ್ಯೆ : ಆಕುಕ 187 ಪಿಐಎಂ 2025, ದಿನಾಂಕ:08-05-2025 ರಲ್ಲಿ ಕೆಳಕಂಡ ಅಧಿಕಾರಿಗಳನ್ನು ಸರ್ಕಾರಿ ಸೇವೆಯಿಂದ ಅಮಾನತ್ತು ಗೊಳಿಸಿ ಆದೇಶಿಸಿದೆ. ಮತ್ತು ಪ್ರಕರಣವನ್ನು, ತನಿಖೆಗಾಗಿ ಕರ್ನಾಟಕ ಲೋಕಾಯುಕ್ತ ಕಾಯದೆ 1984ರ ಕಲಂ-7 (2-ಎ) ರನ್ವಯ, ಲೋಕಾಯುಕ್ತಕ್ಕೆ ವಹಿಸಿ ಆದೇಶಿಸಿದೆ.
<ol>
<li>ಡಾ. ಸರಳಾದೇವಿ, ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ಮತ್ತು ಪ್ರಭಾರಿ ಜಿಲ್ಲಾ ಆಯುಷ್ ಅಧಿಕಾರಿ, ವಿಜಾಯನಗರ ಜಿಲ್ಲೆ.</li>
<li>ಶ್ರೀ ಶರಣಪ್ಪ ಜಿನಗಾ, ಆಡಳಿತಾಧಿಕಾರಿ, ಜಿಲ್ಲಾ ಆಯುಷ್ ಕಛೇರಿ ಬಳ್ಳಾರಿ.</li>
<li>ಶ್ರೀ ಖಲಂದರ್ ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಬಳ್ಳಾರಿ.</li>
</ol>
</td></tr>
</table>

<table>
<tr>
<td>ಇ)</td>
<td>ಇಂಡೆಂಟ್ ಮತ್ತು ಅಗತ್ಯ ಮೌಲ್ಯಮಾಪನ ಕಾರ್ಯವಿಧಾನ ಇಲ್ಲದೇ ಔಷಧ ಖರೀದಿಯಾಗಿದ್ದು. ಹೊಸಪೇಟೆಯಲ್ಲಿ 5 ಲಕ್ಷ ರೂ.ಗಳ ಆರ್ಥಿಕ ಅಧಿಕಾರ ಮೀರಿ 39 ಲಕ್ಷ ರೂ. ಪಾವತಿ ಮಾಡಿರುವುದು ನಿಜವೇ: ಹಾಗಿದ್ದಲ್ಲಿ ಇಂತಹ ಪ್ರಕರಣಗಳು ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ನಡೆದಿದೆ: ಹಾಗೂ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮವೇನು:</td>
<td>ಸರ್ಕಾರಿ ಆಯುರ್ವೇದ ಆಸ್ಪತ್ರೆ ಹೊಸಪೇಟೆ, ವಿಜಯನಗರ ಜಿಲ್ಲೆ. ಇಲ್ಲಿ ಇಂಡೆಂಟ್ ಮತ್ತು ಅಗತ್ಯ ಮೌಲ್ಯಮಾಪನ ಕಾರ್ಯವಿಧಾನ ಇಲ್ಲದೇ 5 ಲಕ್ಷ ರೂ.ಗಳ ಆರ್ಥಿಕ ಅಧಿಕಾರ ಮೀರಿ 39 ಲಕ್ಷ ರೂ. ಪಾವತಿ ಮಾಡಿ ಔಷಧ ಖರೀದಿಸಿರುವ ಬಗ್ಗೆ ಮತ್ತು ಇತರ ಆರೋಪಗಳ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ನಿರ್ದೇಶನಾಲಯದಿಂದ ತನಿಖಾ ತಂಡವನ್ನು ನೇಮಿಸಲಾಗಿರುತ್ತದೆ., ಸದರಿ ತನಿಖಾ ತಂಡವು ಆಸ್ಪತ್ರೆಗೆ ಭೇಟಿ ನೀಡಿ ತನಿಖೆ ಕೈಗೊಂಡಿದ್ದು, ವರದಿ ಸಲ್ಲಿಸುವುದು ಬಾಕಿಯಿರುತ್ತದೆ. ವರದಿ ಸಲ್ಲಿಸಿದ ನಂತರ ನಿಯಮಾನುಸಾರ ಸೂಕ್ತ ಕ್ರಮ ವಹಿಸಲಾಗುವುದು.</td>
</tr>
<tr>
<td>ಈ)</td>
<td>ರಾಜ್ಯದಲ್ಲಿ ಆಯುಷ್ ಇಲಾಖೆ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಕಳೆದ 05 ವರ್ಷದಿಂದ ಇಲ್ಲಿಯವರೆಗೂ ಎಷ್ಟು ಸಾರ್ವಜನಿಕರು ಇದರ ಪ್ರಯೋಜನವನ್ನು ಬಳಸಿಕೊಂಡಿರುತ್ತಾರೆ?</td>
<td>ಆಯುಷ್ ಇಲಾಖೆ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಕಳೆದ 05 ವರ್ಷಗಳಲ್ಲಿ ಪ್ರಯೋಜನವನ್ನು ಪಡೆದ ಫಲಾನುಭವಿಗಳ ವಿವರ
<table>
<tr><td rowspan="2">ವರ್ಷ</td><td colspan="3">ಫಲಾನುಭವಿಗಳು</td></tr>
<tr><td>OPD</td><td>IPD</td><td>Total</td></tr>
<tr><td>2020-21</td><td>33,17,650</td><td>9,170</td><td>33,26,820</td></tr>
<tr><td>2021-22</td><td>37,04,715</td><td>21,676</td><td>37,26,391</td></tr>
<tr><td>2022-23</td><td>49,54,545</td><td>75,074</td><td>50,29,619</td></tr>
<tr><td>2023-24</td><td>54,17,676</td><td>90,311</td><td>55,07,987</td></tr>
<tr><td>2024-25</td><td>57,12,158</td><td>1,11,077</td><td>58,23,235</td></tr>
</table>
</td>
</tr>
</table>

ಸಂಖ್ಯೆ: ಆಕುಕ 319 ಪಿಟಿಡಿ 2025

**(ದಿನೇಶ್ ಗುಂಡೂರಾವ್)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು